ಮಧ್ಯಂತರ ಅರ್ಜಿಯ ಸಂಖ್ಯೆ 11 ರಲ್ಲಿನ ಆದೇಶದ ಮೇರೆಗೆ ಇಂದು ದಿ: 09.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು **: 5** ರಿಂದ **09** ನೇ ಪ್ರತಿವಾದಿಗಳ ಪರ ಶ್ರೀ ಕೆ**.**ಆರ್ ವಕೀಲರಿಂದ**,**

ಮೂಲ ದಾವೆ ನಂ. 29/2019 ಹಾಗೂ ಮೂಲ ದಾವೆ ನಂ. 16/2020 ರಲ್ಲಿನ ದಾವಾ ಸ್ವತ್ತು ಒಂದೇ ಎನ್ನುವುದು ನಿಜ. ಆ ಕುರಿತು ನಾವು ದಾಖಲೆಗಳನ್ನು ಹಾಜರುಪಡಿಸಿದ್ದು, ಅವರು ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ ಎನ್ನುವುದು ನಿಜ.

ದಾವಾ ಸ್ವತ್ತಿನ ಸರ್ವೆ ನಂ. 39/4, ವಿಸ್ತೀರ್ಣ 06 ಎಕರೆ. ನಿಪಿ: 03 ನಾವು ಹಾಜರುಪಡಿಸಿದ ದಾಖಲೆ. ನಿಪಿ: 03 ಪಹಣಿ ಪತ್ರಿಕೆ 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿರುತ್ತದೆ. ಪಕ್ಕಾಪೋಡಿ ಆದ ನಂತರ ಅವರ ಹೆಸರಿಗೆ ಎಂ.ಆರ್. ನಂ.ಟಿ6/2018-2019 ರಂತೆ ಆಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಿಪಿ: 03 ರಲ್ಲಿರುವ ಸದರಿ ಎಂ.ಆರ್. ದಾಖಲೆಯನ್ನು ತೆಗೆಸಿರುತ್ತೇನೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎನ್ನುವುದು ಗೊತ್ತಿಲ್ಲ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ಸದರಿ ಎಂ.ಆರ್. ದಾಖಲೆ ಇರುವುದಿಲ್ಲ.

ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಸಹಾ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಮೂಲ ದಾವೆ ನಂ. 16/2020 ರಲ್ಲಿನ ನಿಪಿ: 1 ದಾವಾ ಆಸ್ತಿಗೆ ಸಂಬಂಧಪಟ್ಟ ಪಹಣಿ. ನಾವು ಹಾಜರುಪಡಿಸಿದ ನಿಪಿ: 3 ಮತ್ತು ಸದರಿ ನಿಪಿ: 1 ಎರಡೂ ಒಂದೇ ದಾಖಲೆ. 1 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಜಂಟಿಯಾಗಿ ಪಹಣಿ ಬಂದಿರುತ್ತದೆ. ಮೂಲ ದಾವೆ ನಂ. 16/2020 ರಲ್ಲಿನ ನಿಪಿ: 2 ರ ಪ್ರಕಾರ ಒಟ್ಟು 19 ಎಕರೆ 29 ಗುಂಟೆ ಜಮೀನು ಇರುತ್ತದೆ ಎಂದರೆ ಸಾಕ್ಷಿ, ಇರುಬಹುದು ಎಂದು ಹೇಳುತ್ತಾರೆ. ಸದರಿ 19 ಎಕರೆ 29 ಗುಂಟೆ ಜಮೀನು 1 ರಿಂದ 4 ನೇ ಪ್ರತಿವಾದಿಗಳು ಮತ್ತು ಅವರ ತಂದೆಯ ಸಹೋದರರ ಹೆಸರಿಗೆ ಜಂಟಿಯಾಗಿ ಪಹಣಿ ಇರುತ್ತದೆ ಎನ್ನುವುದು ನಿಜ. ಸದರಿ ನಿಪಿ: 2 ರಲ್ಲಿ 06 ಎಕರೆ ಜಮೀನು 1 ರಿಂದ 4 ನೇ ಪ್ರತಿವಾದಿಗಳ ಹೆಸರಿನಲ್ಲಿ ಜಂಟಿಯಾಗಿ ಇರುತ್ತದೆ ಎನ್ನುವುದು ನಿಜ.

2005-2006 ರಲ್ಲಿ ಅವರು ವಿಭಜನೆ ಮಾಡಿಕೊಂಡಾಗ ಅವರ ಹೆಸರಿಗೆ ಬಂದಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. ನಿಪಿ: 05 ರಂತೆ 06 ಎಕರೆ ಜಮೀನು 1 ರಿಂದ 4 ನೇ ಪ್ರತಿವಾದಿಗಳ ಹೆಸರಿಗೆ ಜಂಟಿಯಾಗಿ ಬಂದಿರುತ್ತದೆ ಎನ್ನುವುದು ನಿಜ. ನಿಪಿ 05 ರಲ್ಲಿರುವ ಉಳಿದ 13 ಎಕರೆ 29 ಗುಂಟೆಯು ರಂಗಸ್ವಾಮಿ, ತಿಪ್ಪೇಸ್ವಾಮಿ, ಚಂದ್ರಪ್ಪ ಇವರಿಗೆ ಹೋಗಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ. 2005-2006 ರಲ್ಲಿ ಅವರು ವಿಭಜನೆ ಮಾಡಿಕೊಂಡಾಗ ಅವರ ಹೆಸರಿಗೆ ಬಂದಿರುತ್ತದೆ ಎನ್ನುವುದು ಗೊತ್ತಿರುವುದಿಲ್ಲ.

ನಾವು ತೆಗೆದುಕೊಂಡು ಸರ್ವೆ ನಂ. 39/4 ಪಕ್ಕಾಪೋಡ್ ದುರಸ್ತಿ ಆದ ನಂತರ 1 ರಿಂದ 4 ನೇ ಪ್ರತಿವಾದಿಗಳಿಗೆ ಸದರಿ ಜಮೀನು ಬಂದಿರುತ್ತದೆ ಎಂದು 5 ರಿಂದ 09 ನೇ ಪ್ರತಿವಾದಿಗಳ ಪರ ವಕೀಲರು

ಹಿಸ್ಸಾ ಮೋಜಣಿಯಂತೆ ಹಕ್ಕು ದಾಖಲಾತಿಯ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೌದು ಎಂದು ಹೇಳಿದ್ದರಿಂದ, ಸದರಿ ದಾಖಲೆಯನ್ನು ಮೂಲ ದಾವೆ ನಂ. 16/2020 ರಲ್ಲಿ ನಿಪಿ:56 ಎಂದು ಗುರುತಿಸಲಾಯಿತು.

ಸಾಕ್ಷಿಗೆ 05 ರಿಂದ 09 ನೇ ಪ್ರತಿವಾದಿಗಳ ಪರ ವಕೀಲರು ಆಕಾರ ಬಂದ್ ನ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೌದು ಎಂದು ಹೇಳಿದ್ದರಿಂದ, ಸದರಿ ದಾಖಲೆಯನ್ನು ಮೂಲ ದಾವೆ ನಂ. 16/2020 ರಲ್ಲಿ ನಿಪಿ:57 ಎಂದು ಗುರುತಿಸಲಾಯಿತು.

ಉಳಿದ 13 ಎಕರೆ 29 ಗುಂಟೆಯ ಸಿ.ಕೆ.ರಂಗಸ್ವಾಮಿ, ಚಂದ್ರಪ್ಪ ಮತ್ತು ತಿಪ್ಪೇಸ್ವಾಮಿ ಇವರ ಹೆಸರಿಗೆ ಪಕ್ಕಾಪೋಡ್ ಆಗಿರುತ್ತದೆ ಎಂದು ಸಾಕ್ಷಿಗೆ 05 ರಿಂದ 09 ನೇ ಪ್ರತಿವಾದಿಗಳ ಪರ ವಕೀಲರು ಹಿಸ್ಸಾ ಮೋಜಣಿಯಂತೆ ಹಕ್ಕು ದಾಖಲಾತಿಯ ದೃಢೀಕೃತ ನಕಲನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ಸದರಿ ದಾಖಲೆಯನ್ನು ನೋಡಿ ಹೌದು ಎಂದು ಹೇಳಿದ್ದರಿಂದ, ಸದರಿ ದಾಖಲೆಯನ್ನು ಮೂಲ ದಾವೆ ನಂ. 16/2020 ರಲ್ಲಿ ನಿಪಿ:58 ಎಂದು ಗುರುತಿಸಲಾಯಿತು.

1 ರಿಂದ 4 ನೇ ಪ್ರತಿವಾದಿಗಳ ಎಲ್ಲಾ ಮಕ್ಕಳ ಬಗ್ಗೆ ಇಂದಿನವರೆಗೂ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎಂದು ಹೇಳುತ್ತಾರೆ.

**ಮರು ವಿಚಾರಣೆ; ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಿದೆ.)

ಓ.ಹೇ.ಕೇ.ಸ.ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಹೊಸದುರ್ಗ.